ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/139/ಇಸಿಎಸ್(3)/2019

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷ ನಿರ್ದೇಶನಾಲಯ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 27.09.2019.

**ಜ್ಞಾಪನ**

ವಿಷಯ : ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಡುವ ಪಾಲಿಟೆಕ್ನಿಕ್‌ಗಳಲ್ಲಿ ನಡೆಸುವ ಪ್ರೋಗ್ರಾಮ್‌ಗಳಿಗೆ 2019-20 ನೇ ಸಾಲಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆ ಪಡೆಯುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 430 ಟಿಪಿಇ 97, ದಿನಾಂಕ: 04.12.1998.
2. ಸರ್ಕಾರಿ ಆದೇಶ ಸಂಖ್ಯೆ: ED 39 egov 2015, ದಿನಾಂಕ: 31.03.2016.

*-*-*-*-*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು ಉಲ್ಲೇಖದಲ್ಲಿ ತಿಳಿಸಿರುವ ಸರ್ಕಾರಿ ಆದೇಶಗಳನ್ವಯ 2019-20 ರ ಸಾಲಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆ ಪಡೆಯಬೇಕಾಗಿರುತ್ತದೆ. ಪಾಲಿಟೆಕ್ನಿಕ್‌ಗಳು ಸಂಯೋಜನೆ ಪಡೆಯಲು ನಿಗದಿತ ಸಂಯೋಜನೆ ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಲೆಕ್ಕ ಶೀರ್ಷಿಕೆ 0202-02-101-0-01 "ಅಫಿಲಿಯೇಷನ್ ಫೀ ಫಾರ್ ಟೆಕ್ನಿಕಲ್ ಎಜುಕೇಷನ್"ಯಡಿ **ದಿನಾಂಕ: 14.10.2019 ರೊಳಗೆ** ಸರ್ಕಾರಿ ಖಜಾನೆಗೆ (ಖಜಾನೆ-2 ರ ಮೂಲಕ) ಜಮಾ ಮಾಡುವುದು. ಈ ಸಂಬಂಧ ಸರ್ಕಾರಿ ಖಜಾನೆಗೆ ಜಮಾ ಮಾಡಬೇಕಾದ ಶುಲ್ಕದ ವಿವರ ಈ ಕೆಳಕಂಡಂತಿದೆ.

| | | | |
|---|---|---|---|
| 1. | ಈಗಾಗಲೇ ನಡೆಸುತ್ತಿರುವ ಪ್ರತಿ ಪ್ರೋಗ್ರಾಮ್‌ಗಳಿಗೆ | - | ರೂ.2000/- |
| 2. | ಈಗಾಗಲೇ ನಡೆಸುತ್ತಿದ್ದು 2019-20 ನೇ ಸಾಲಿನಲ್ಲಿ ಪ್ರವೇಶ ಸಂಖ್ಯೆ ಹೆಚ್ಚಿಸಿರುವ ಪ್ರತಿ ಪ್ರೋಗ್ರಾಮ್‌ಗೆ | - | ರೂ.2000/- |
| 3. | 2019-20ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಪ್ರತಿ ಪ್ರೋಗ್ರಾಮ್‌ಗಳಿಗೆ | - | ರೂ.10,000/- |
| 4. | 2019-20 ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾದ ಪಾಲಿಟೆಕ್ನಿಕ್‌ಗಳಿಗೆ | - | ರೂ 20,000/- |
| 5. | 2019-20 ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾದ ಪಾಲಿಟೆಕ್ನಿಕ್‌ಗಳಿಗೆ ಪ್ರಾರಂಭ ಮಾಡಿರುವ ಪ್ರತಿ ಹೊಸ ಪ್ರೋಗ್ರಾಮ್‌ಗೆ ಕ್ರಮವಾಗಿ | - | ರೂ 10,000/- |

ಸಂಯೋಜನಾ ಶುಲ್ಕವನ್ನು ಸರ್ಕಾರಿ ಖಜಾನೆಗೆ ಜಮಾ ಮಾಡಿ, ಜಮಾ ಮಾಡಿದ ಮೂಲ ರಸೀದಿಯನ್ನು ಸಂಸ್ಥೆಯಲ್ಲಿಯೇ ಇಡತಕ್ಕದ್ದು, ಸಂಯೋಜನಾ ಶುಲ್ಕ ಪಾವತಿ ಮಾಡಿರುವ ರಸೀದಿಯ ಜೆರಾಕ್ಸ್ ಪ್ರತಿಯೊಂದಿಗೆ, 2019-20 ನೇ ಸಾಲಿಗೆ ಎ.ಐ.ಸಿ.ಟಿ.ಇ, ನವದೆಹಲಿ ಇವರಿಂದ ನೀಡಲಾದ E.O.A ಮತ್ತು ರಾಜ್ಯ ಸರ್ಕಾರದಿಂದ ಪ್ರವೇಶಾತಿ ಅನುಮೋದಿಸಲ್ಪಟ್ಟ ಪತ್ರದ ಜೆರಾಕ್ಸ್ ಪ್ರತಿಗಳನ್ನು ಪ್ರಾಚಾರ್ಯರಿಂದ ಧೃಢೀಕರಿಸಿ ತಾಂತ್ರಿಕ ಪರೀಕ್ಷಾ ಮಂಡಳಿಗೆ ಸಲ್ಲಿಸಬೇಕಾಗಿ ಸೂಚಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
27/9/19

ಇವರಿಗೆ: ರಾಜ್ಯದ ಎಲ್ಲಾ ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ
- ಮುಂದಿನ ಅಗತ್ಯ ಕ್ರಮಕ್ಕಾಗಿ.

**<u>ವಿಶೇಷ ಸೂಚನೆ:</u>**

1. ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳು ಸಂಯೋಜನಾ ಶುಲ್ಕದಿಂದ ವಿನಾಯಿತಿ ಹೊಂದಿದ್ದು, ಸಂಯೋಜನೆಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಬೇಕಾಗಿರುತ್ತದೆ.
2. ರಾಜ್ಯದ ಎಲ್ಲಾ ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳು ಸಂಯೋಜನೆ ಶುಲ್ಕ ಪಾವತಿಸದಿದ್ದಲ್ಲಿ, ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನಿಮ್ಮ ಸಂಸ್ಥೆಗೆ ನೀಡಲಾಗಿರುವ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ಮುಂದುವರೆದು ಮೊದಲನೆ ಹಂತವಾಗಿ ಅಕ್ಟೋಬರ್/ನವೆಂಬರ್ 2019 ರ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂಬ ಅಂಶವನ್ನು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ.
3. ಸದರಿ ವಿಷಯದ ಸಂಬಂಧ ಮುಂದಾಗಬಹುದಾದ ಬಾಧಕಗಳಿಗೆ ಸಂಸ್ಥೆಯ ಪ್ರಾಚಾರ್ಯರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಸ್ಪಷ್ಟಪಡಿಸಲಾಗಿದೆ.

ಪ್ರತಿ:

1. ಸಹ ನಿದೇಶಕರು (ಪರೀಕ್ಷೆ)
2. ಸಹ ನಿರ್ದೇಶಕರು (ಎ.ಟಿ.ಎಸ್)
3. ಉಪ ನಿರ್ದೇಶಕರು (ಪರೀಕ್ಷೆ)
4. ಸಹಾಯಕ ನಿರ್ದೇಶಕರು (ಪರೀಕ್ಷೆ(1) ಮತ್ತು (2))
5. ನಿರ್ದೇಶಕರ ಆಪ್ತ ಶಾಖೆಗೆ – ಮಾಹಿತಿಗಾಗಿ

6. e- Governence - ಪ್ರಕಟಪಡಿಸಲು ಹಾಗೂ. 27/09/19